ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 26-03-2021 ಪ್ರಶ್ನೆ ಸಂಖ್ಯೆ : 1899(2294)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 26-03-2021

ಉತ್ತರಿಸುವ ಸಚಿವರು: ಮಾನ್ಯ ಕೃಷಿ ಸಚಿವರು

ವಿಷಯ : ಕೃಷಿ ಯಂತ್ರಧಾರೆ ಯೋಜನೆಗಳ ಬಂಡವಾಳ ಹೂಡಿಕೆ ಬಗ್ಗೆ

(ಅ) ಕೃಷಿ ಯಂತ್ರಧಾರೆ ಯೋಜನೆಯಡಿ ಬಂಡವಾಳ ಹೂಡಿಕೆದಾರರ ಪಾಲು ಎಷ್ಟು; ಸರ್ಕಾರದ ಪಾಲು ಎಷ್ಟು;

(ಆ) ಯಾವ ಯಾವ ಯಂತ್ರಗಳಿಗೆ ಎಷ್ಟೆಷ್ಟು ಹಣ ಹೂಡಲಾಗಿದೆ; (ಯಂತ್ರವಾರು ಮಾಹಿತಿ ನೀಡುವುದು)

(ಇ) ಈ ಕೃಷಿ ಯಂತ್ರಧಾರೆ ಯೋಜನೆಯಡಿ ಬಾಡಿಗೆ ಪಡೆಯುವ ರೈತರುಗಳಿಗೆ ಯಾವ ಯಾವ ಯಂತ್ರಗಳಿಗೆ, ಪ್ರತಿ ಗಂಟೆಗೆ, ಎಷ್ಟೆಷ್ಟು ಹಣ ನಿಗದಿ ಮಾಡಲಾಗಿದೆ;

(ಈ) ಹೆಚ್ಚುವರಿ ಬಾಡಿಗೆ ಪಡೆಯುವ ಹಣದಿಂದ ರೈತರುಗಳಿಗೆ ಆರ್ಥಿಕ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬಾಡಿಗೆ ದರ ಕಡಿಮೆ ಮಾಡುವ ಉದ್ದೇಶ ಇದೆಯೇ; ಇದ್ದಲ್ಲಿ, ಯಾವಾಗ ಮಾಡಲಾಗುವುದು?